ಇಪ್ಪತ್ತೈದು ದಿವಸ ಆಯಿತು. ಇದರಿಂದ ಅಲ್ಲಿನ ರೈತರಿಗೆ ಆದಂಥ ನಷ್ಟವನ್ನು ನೀವು ಯಾವ ರೀತಿ ಭರಿಸುತ್ತೀರಿ ?

ಶ್ರೀ ಲಕ್ಷ್ಮೀನರಸಿಂಹಯ್ಯ.— ಆಕಸ್ಮಾತ್ತಾಗಿ ಇಂತಹ ಒಂದು ಘಟನೆಯೇನಾದರೂ ನಡೆದಿದ್ದರೆ ನಿಜವಾಗಲೂ ಕೂಡಾ ವಿಷಾದವನ್ನು ವ್ಯಕ್ತಪಡಿಸುತ್ತೇನೆ. ಅದನ್ನು ಶೀಘ್ರವಾಗಿ ಮಾನ್ಯ ಶಾಸಕರು ಅಲ್ಲಿನ ಅಧಿಕಾರಿಗಳ ಗಮನಕ್ಕೆ ತಂದಿದ್ದರೆ ಇದು ರಿಪೇರಿಯಾಗುವುದಕ್ಕೆ ಇಷ್ಟೊಂದು ಸಮಯ ತೆಗೆದುಕೊಳ್ಳುತ್ತಿರಲಿಲ್ಲವೆಂದು ನನ್ನ ಭಾವನೆ. ನಿಮ್ಮ ಗಮನಕ್ಕೂ ಇದು ಬಹಳ ತಡವಾಗಿ ಬಂದಿರ ಬಹುದು. ಅದಕ್ಕೋಸ್ಕರವಾಗಿ ಈ ರಿಪೇರಿಮಾಡುವುದಕ್ಕೆ ಇಷ್ಟು ತಡವಾಗಿರಬಹುದು

ಶ್ರೀ ಜಿ. ಎಸ್ ಶಿವನಂಜಪ್ಪ.—ಅಧ್ಯಕ್ಷರೇ, ''ಎ''ಗೆ ಉತ್ತರವಾಗಿ ಬೇರೆ ಬೇರೆ ವಿಭಾಗದಿಂದ ಬರತಕ್ಕಂಥ ಅಧಿಕಾರಿಗಳನ್ನು ಬೇರೆ ಬೇರೆ ವಿಭಾಗಕ್ಕೆ ಟ್ರಾನ್ಸ್‌ಫರ್ ಮಾಡಲಿಕ್ಕೆ ಆಗುವುದಿಲ್ಲ ಎಂದು ಮಾನ್ಯ ಸಚಿವರು ಹೇಳಿದ್ದಾರೆ. ಮತ್ತೆ ಇದರ ಬಗ್ಗೆ ಸರ್ಕಾರದ ಒಂದು ಸುತ್ತೋಲೆ ಸಹಾ ಇದೆ. ಏನೆಂದರೆ ಗಂಡ ಹೆಂಡತಿ ಸರ್ಕಾರಿ ನೌಕರರಾಗಿದ್ದು ಗಂಡ ಬಳ್ಳಾರಿಯಲ್ಲಿ ಕೆಲಸ ಮಾಡುತ್ತಿದ್ದು ಹೆಂಡತಿ ಬೆಂಗಳೂರಿನಲ್ಲಿ ಕೆಲಸ ಮಾಡುತ್ತಿದ್ದರೆ, ಇಲ್ಲಿ ಹೆಂಡತಿ ಗಂಡ ಇರುವ ಸ್ಥಳಕ್ಕಾದರೂ ಹೋಗಬಹುದು, ಇಲ್ಲ ಗಂಡನು ಹೆಂಡತಿ ಕೆಲಸ ಮಾಡುವ ಸ್ಥಳಕ್ಕಾದರೂ ಬರಬಹುದು. ಈ ರೀತಿಯ ಸಂದರ್ಭ ಬಂದಾಗ ನೀವು ಮೇಲಿನಂತೆ ಉತ್ತರ ಹೇಳಿದರೆ ಸರ್ಕಾರದವರು ''ಫೋರ್ಸ್ ಡೈವರ್ಸ್'' ಮಾಡಿದ ಹಾಗೆ ಆಗಲಿಲ್ಲವೇ ? ಅವರಿಗೆ ಒಂದು ವಿಶೇಷ ರೀತಿಯ ಸೌಲಭ್ಯವನ್ನು ಕೊಟ್ಟು ಇಂಥ ಒಂದು ಸಂದರ್ಭದಲ್ಲಿ ಅವರನ್ನು ಟ್ರಾನ್ಸ್‌ಫರ್ ಮಾಡಲಿಕ್ಕೆ ಸರ್ಕಾರ ಅಥವಾ ಮಂಡಳಿಯಂ ವಿರೋಧ ಏನು ಇದೆ ಅದರಿಂದ ಏನು ತೊಂದರೆಯಾಗುತ್ತಿದೆ ?

ಶ್ರೀ ಲಕ್ಷ್ಮೀನರಸಿಂಹಯ್ಯ.—ಮಾನ್ಯ ಶಿವನಂಜಪ್ಪನವರು ಲೈನ್‌ಮೆನ್ ಬಗ್ಗೆ ಬಹಳ ಕೇಳುತ್ತಿದ್ದಾರೆ. ನಾವು ಇಲ್ಲಿಯವರೆಗೆ ಹೆಣ್ಣುಮಕ್ಕಳನ್ನು ಲೈನ್‌ಮೆನ್ ಆಗಿ ಅಪಾಯಿಂಟ್ ಮಾಡಿಕೊಂಡಿಲ್ಲ. ಕೇಡರ್ ಅಂಡ್ ರೆಕ್ರೂಟ್‌ಮೆಂಟ್ ರೂಲ್ಸ್‌ನಲ್ಲಿ ಮಂಡಳಿಯಲ್ಲಿ ಅಪಾಯಿಂಟಿಂಗ್ ಅಥಾರಿಟಿ ಎಕ್ಸಿಕ್ಯೂಟಿವ್ ಇಂಜಿನಿಯರ್ ಇರಬಹುದು ಅವರು ಅವರ ಡಿವಿಜನ್‌ನಲ್ಲಿ ಟ್ರಾನ್ಸ್‌ಫರ್ ಮಾಡಲಿಕ್ಕೆ ಅವಕಾಶ ಇರುತ್ತದೆ ಬೇರೆ ಡಿವಿಜನ್‌ಗಳಿಗೆ ಬೇರೆ ಸರ್ಕಲ್‌ಗಳಿಗೆ ಮಾಡುವುದಿಲ್ಲ. ಆದರೆ ಪರಸ್ಪರ ಇಷ್ಟಪಟ್ಟರೆ ಬೇರೆ ಸರ್ಕಲ್‌ಗಳಿಗೆ ವರ್ಗಾವಣೆಯನ್ನು ಮಾಡುವುದಕ್ಕೆ ಅವಕಾಶ ಇದೆ. ಇವರೇ ಅಲ್ಲಿಗೆ ಹೋಗ ತಕ್ಕಂಥವರನ್ನು ಹಿಡಿದು ಇಲ್ಲಿಗೆ ಬರತಕ್ಕಂಥವರು ಯಾರಾದರೂ ಇದ್ದರೆ ಅವರು ಇವರು ಇಬ್ಬರೂ ಸೇರಿ ಪರಸ್ಪರ ವರ್ಗಾವಣೆಗೆ ಅರ್ಜಿಯನ್ನು ಕೊಟ್ಟಲ್ಲಿ ಅದನ್ನು ಗ್ಯಾರಂಟಿ ಆಗಿ ಮಾಡಿಕೊಡುತ್ತೇವೆ.

ಗ್ರಾಮ ಕೈಗಾರಿಕೆಗಳ ಕಾಯಕ ಕೇಂದ್ರ

೧೫೪೯. ಶ್ರೀ ಚಂದ್ರಕಾಂತ ಜಿ. ಬೆಲ್ಲದ್ (ಧಾರವಾಡ ಶಹರ). ಮಾನ್ಯ ಬಂದರು ಮೀನುಗಾರಿಕೆ ಹಾಗೂ ಸಣ್ಣ ಕೈಗಾರಿಕೆಗಳ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿ ಮಾದರಿಯಾದ ಗ್ರಾಮ ಕೈಗಾರಿಕೆಗಳ ಕಾಯಕ ಕೇಂದ್ರ ಎಂದು ಯಾವುದಾದರೂ ಯೋಜನೆ ಜಾರಿಯಲ್ಲಿದೆಯೇ ಹಾಗಾದರೆ ಆವುಗಳ ವಿವರ ಕೊಡುವುದು.

ಆ) ಗ್ರಾಮ ಕೈಗಾರಿಕೆಗಳಾದ ಕುಂಬಾರ, ಕಮ್ಮಾರ, ಮೇದಾರ, ಬಡಿಗ ಹಾಗೂ ಹಗ್ಗ ವಗೈರೆ ಮಾಡುವ ಇವರಿಗೆ ಅಭಿವೃದ್ಧಿ ಯೋಜನೆಯೇನಾದರೂ ರೂಪಿಸಿದೆಯೇ?

ಇ) ಧಾರವಾಡ ಶಹರದ ಸಮೀಪದಲ್ಲಿ ಒಂದು ಕಾಯಕ ಕೇಂದ್ರ ಮಾದರಿಯಾಗಿ ರೂಪಿಸುವಲ್ಲಿ ಕಾರ್ಯಗಾರ ಸಹಿತ ವಸತಿ ಕಟ್ಟಡಗಳನ್ನು ರೂಪಿಸಿ ಸಹಕಾರ ಸಮಾಜ ನಿರ್ಮಾಣ ಮಾಡುವ ಯೋಜನೆಗೆ ಸಹಾಯಮಾಡಲು ಸರ್ಕಾರ ಆಲೋಚಿಸಿದೆಯೇ ?

ಶ್ರೀ ಎಂ. ರಘುಪತಿ (ಬಂದರು, ಮೀನುಗಾರಿಕೆ ಮತ್ತು ಸಣ್ಣ ಪ್ರಮಾಣದ ಕೈಗಾರಿಕಾ ಸಚಿವರು). —

ಅ) ರಾಜ್ಯದಲ್ಲಿ ಗ್ರಾಮ ಕೈಗಾರಿಕೆಗಳ ಕಾಯಕ ಕೇಂದ್ರ ಎಂಬ ಯೋಜನೆ ಜಾರಿಯಲ್ಲಿಲ್ಲ.

ಆ) ಗ್ರಾಮೀಣ ಕಸಬುದಾರರಿಗೆ ಅವರ ವೃತ್ತಿಯಲ್ಲಿ ಹೆಚ್ಚಿನ ತಾಂತ್ರಿಕ ಜ್ಞಾನ ಪಡೆದು ತಮ್ಮ ತಮ್ಮ ಘಟಕಗಳನ್ನು ಸ್ಥಾಪಿಸಲು ಜಿಲ್ಲಾ ಕೈಗಾರಿಕಾ ಕೇಂದ್ರ ಹಾಗೂ ಗ್ರಾಮೀಣ ಅಭಿವೃದ್ಧಿ ಸಂಸ್ಥೆಗಳು ಈ ಕೆಳಗೆ ಕಂಡ ಕಾರ್ಯಕ್ರಮಗಳನ್ನು ಕೈಗೊಳ್ಳುತ್ತವೆ. —

೧) ಗ್ರಾಮೀಣ ಕಸಬುದಾರರಿಗೆ ತರಬೇತಿಯನ್ನು ಕೊಡುವುದು.

೨) ತರಬೇತಿ ಪಡೆದವರಿಗೆ ಹಾಗೂ ಗ್ರಾಮೀಣ ಕಸುಬುದಾರರಿಗೆ ಅವರ ಕಸಂಬಿಗೆ ತಕ್ಕಂತೆ ಉಚಿತವಾಗಿ ಸಲಕರಣೆಗಳನ್ನು ಕೊಡುವುದು.

೩) ರಿಯಾಯಿತಿ ದರದಲ್ಲಿ ವಾಣಿಜ್ಯ ಬ್ಯಾಂಕಿಂಗಳಿಂದ ಅಥವಾ ಹಣಕಾಸು ಸಂಸ್ಥೆಯಿಂದ ಸಾಲವನ್ನು ಒದಗಿಸುವುದು.

೪) ವಿವಿಧ ಮಂಡಳಿಗಳ ಹಾಗೂ ನಿಗಮಗಳ ಮೂಲಕ ತರಬೇತಿ ಸಲಕರಣೆ ಹಾಗೂ ಸಹಾಯ ಧನದ ಯೋಜನೆ.

೫) ವಸತಿ ಹಾಗೂ ಕಾರ್ಯಾಗಾರಗಳ ನಿರ್ಮಾಣ.

೬) ಕಚ್ಚಾವಸ್ತು ಸರಬರಾಜು ಹಾಗೂ ಮಾರಾಟ ನೆರವು.

ಈ ಎಲ್ಲಾ ಕಾರ್ಯಕ್ರಮಗಳಿಂದ ಕಸಬುದಾರರಿಗೆ ಅನುಕೂಲವಾಗಿದೆ.

ಇ) ಧಾರವಾಡ ಶಹರದ ಸಮೀಪದಲ್ಲಿ ಕಾಯಕ ಕೇಂದ್ರವನ್ನು ಸ್ಥಾಪಿಸುವ ಯೋಜನೆ ಇಲ್ಲ.

೪.೩೦ ಪಿ.ಎಂ.

ಶ್ರೀ ಚಂದ್ರಕಾಂತ ಜಿ. ಬೆಲ್ಲದ್.—ಮಾನ್ಯ ಅಧ್ಯಕ್ಷರೇ, ''ಆ'' ಪ್ರಶ್ನೆಗೆ ಉತ್ತರ ಕೊಡತಕ್ಕ ಸಂದರ್ಭದಲ್ಲಿ ೬ ಬೇರೆ ಬೇರೆ ರೀತಿಯ ಸಹಾಯ ಸವಲತ್ತುಗಳನ್ನು ಕೊಟ್ಟು ಗ್ರಾಮ ಕೈಗಾರಿಕೆಗಳಿಗೆ ಹೆಚ್ಚಿನ ಪ್ರೋತ್ಸಾಹವನ್ನು ಕೊಡುತ್ತಿದ್ದೇವೆ ಎಂದು ಹೇಳಿದ್ದಾರೆ ಈ ಪ್ರೋತ್ಸಾಹವನ್ನು ಪಡೆದಂತಹ ಈ ಕಾಯಕದಲ್ಲಿ ನಿರತರಾದಂತಹ ಜನತೆ ಎಷ್ಟು ಮಂದಿ ಇದ್ದಾರೆ ? ಎಷ್ಟು ಜನ ಈ ವೃತ್ತಿಯಲ್ಲಿ ಬೆಳೆಯುತ್ತಿದ್ದಾರೆ. ಇದರಿಂದ ಅವರ ಉಪ ಜೀವನ ಗ್ರಾಮೀಣ ಪ್ರದೇಶಗಳಲ್ಲಿ ನಡೆಯುತ್ತಿದೆಯೇ ಎಂದು ಕೇಳುತ್ತಿದ್ದೇನೆ ? ಧಾರವಾಡ ಶಹರಿನಲ್ಲಿ ಇಂಥ ಒಂದು ಕಾಯಕದಲ್ಲಿ ನಿರತರಾದಂತಹ ಕುಂಬಾರ ಕರ್ಮಾರ, ಬಡಿಗರು ಏನಿದ್ದಾರೆ ಇಂತಹ ಜನರಿಗೆ ಒಂದು ಕಾಯಕದ ಕೇಂದ್ರವನ್ನು ಮಾಡಿದರೆ, ಸತತವಾಗಿ ಇಂತಹ ಕಾಯಕದಲ್ಲಿ ನಿರತರಾದಂತಹವರಿಗೆ ಸಹಾಯವಾಗುತ್ತದೆ. ಆದ್ದರಿಂದ ಇಂತಹ ಯೋಜನೆ ಸರ್ಕಾರಕ್ಕೆ ಏನಾದರೂ ಇದೆಯೇ ಎಂದು ಕೇಳುತ್ತಿದ್ದೇನೆ.

ಶ್ರೀ ಎಂ. ರಘುಪತಿ.—ಸನ್ಮಾನ್ಯ ಸಭಾಧ್ಯಕ್ಷರೇ, ಅವರು ಮೂಲತಃ ಪ್ರಶ್ನೆಯನ್ನು ಕೇಳಿರುವುದರಲ್ಲಿಯೇ ಸ್ವಲ್ಪ ವ್ಯತ್ಯಾಸ ಇದೆಯೆಂದು ನನ್ನ ಭಾವನೆ. ಅವರು ಕಾಯಕ ಕೇಂದ್ರದ ಬದಲು ಕಾಮನ್ ಶೆಡ್ಸ್ ಕಾರ್ಯಕ್ರಮ ಏನು ಇದ ಇದರ ಬಗ್ಗೆ ಕೇಳಿದ್ದಾರೆಂದು ತಿಳಿದುಕೊಂಡು ಉತ್ತರ ಹೇಳುತ್ತಿದ್ದೇನೆ. ಕರ್ನಾಟಕ ರಾಜ್ಯದಲ್ಲಿ ೧೧೭ ಕೇಂದ್ರುಗಳನ್ನು ಸ್ಥಾಪನೆ ಮಾಡಿದ್ದೇವೆ. ನಾವು ಎಷ್ಟು ಜನರಿಗೆ ತರಬೇತಿಯನ್ನು ನೀಡಿದ್ದೇವೆ ಎಂಬ ಬಗ್ಗೆ ಮಾನ್ಯ ಸದಸ್ಯರು ಅಂಕಿ ಅಂಶಗಳನ್ನು ಕೇಳಿದ್ದಾರೆ. ಅವುಗಳನ್ನು ಒದಗಿಸಿಕೊಡುತ್ತೇನೆ. ಧಾರವಾಡದಲ್ಲಿ ಒಂದು ಕೇಂದ್ರವನ್ನು ಸ್ಥಾಪಿಸಬೇಕೆಂದು ಒಂದು ಸಲಹೆಯನ್ನು ಮಾನ್ಯ ಸದಸ್ಯರು ಮಾಡಿದ್ದಾರೆ. ಅದು ತುಂಬಾ ಉತ್ತಮವಾದ ಸಲಹೆ. ಎಲ್ಲಾ ತಾಲ್ಲೂಕುಗಳಲ್ಲಿ ಹಂತ ಹಂತವಾಗಿ ಇಂತಹ ಕೇಂದ್ರಗಳನ್ನು ಮಾಡುತ್ತೇವೆ, ಇದು ಸರ್ಕಾರದ ಉದ್ದೇಶ ಹಾಗೂ ಸರ್ಕಾರದ ನೀತಿ ಎಂದು ಹೇಳಿದರೆ ತಪ್ಪಾಗಲಾರದು ಎಂದು ಮಾನ್ಯ ಸದಸ್ಯರಿಗೆ ತಿಳಿಸಲು ಇಷ್ಟ ಪಡುತ್ತೇನೆ.